# ಮಾದರಿಯಾದ ಸಭೆಗಳ ಒಂದು ಚಿತ್ರಣ

ಕರ್ತನ ಸಭೆಯ ಆರಂಭದ ಕುರಿತು, ಅಪೊಸ್ತಲರ ಕೃತ್ಯಗಳು ಮಾತ್ರ ಸವಿವರವನ್ನು ನೀಡುತ್ತದೆ. ಆದಿ ಸಭೆಯು ಪ್ರಥಮವಾಗಿ ಯೆರೂಸಲೇಮಿನಲ್ಲಿ ಪ್ರಾರಂಭವಾಯಿತು (ಅಧ್ಯಾಯ 2); ಹಾಗೂ ಆ ಸಭೆಯಿಂದ ಅಪೊಸ್ತಲರು ಹಾಗೂ ಇತರ ಕ್ರೈಸ್ತರು ಹೊರಟು ಹೋಗಿ ಇತರೆ ಸಭೆಗಳನ್ನು ಆರಂಭಿಸಿದರು. ಸುವಾರ್ತಾ ಸಾರೋಣದ ನಿಮಿತ್ತ ಪ್ರತಿ ಪಟ್ಟಣಗಳಲ್ಲಿ ಸಭೆಗಳು ಸ್ಥಾಪನೆಗೊಂಡವು.[1]

ತರುವಾಯ ಆರಂಭವಾದ ಸಭೆಗಳಿಗೆ, ಅಪೊಸ್ತಲರ ಸಭೆಗಳು ಮಾದರಿಯಾಗಿದೆ, ಮತ್ತು ಅವುಗಳು ಗೌರವಕ್ಕೆ ಅರ್ಹವಾಗಿವೆ. ಸುವಾರ್ತಿಕರು ಆತ್ಮನ ಖಡ್ಗವನ್ನು ಮಾತ್ರ ಹಿಡಿದವರಾಗಿ ಮುಂದಾದರು (ಎಫೆಸ 6:17). ಅವರಿಗೆ ಕ್ರಮದ ಪುಸ್ತಕಗಳಾಗಲೀ, ಪ್ರಾರ್ಥನಾ ಪುಸ್ತಕ ಗಳಾಗಲೀ, ಕ್ರಮ ಪುಸ್ತಕಗಳಾಗಲೀ, ನಿಯಮಾವಳಿಗಳಾಗಲೀ, ಅಥವಾ ಆದೇಶಗಳಾಗಲೀ ಇರಲಿಲ್ಲ, ಮೂಲ ಸಭೆಗಳನ್ನು ಸ್ಥಾಪಿಸಲು ಅವರು ಇಂಥವುಗಳನ್ನು ಬಳಸಲಿಲ್ಲ.

ಸುವಾರ್ತಾ ಸೇವೆಯಲ್ಲಿ ಇಂಥಹ ಕ್ರಮಗಳನ್ನು ಈ ದಿನಗಳಲ್ಲಿ ಬಳಸುತ್ತಿರುವರೇ? ಅಪೊಸ್ತಲರ ಕೃತ್ಯದ ಮಾದರಿಯ ಸಭೆಗಳನ್ನು ಗಮನಿಸುವದು ಯೋಗ್ಯವಾಗಿದೆ.

## ಸ್ವಯಂ ಆಡಳಿತಕ್ಕೆ ಒಳಪಟ್ಟಿದ್ದರು

ಸಭೆಗಳಲ್ಲಿನ ಕಾರ್ಯಗಳನ್ನು ಹಿರಿಯರೇ ನಿರ್ವಹಿಸಿದ್ದರಿಂದ, ಹೊಸ ಸಭೆಗಳು ಸ್ವ - ಆಡಳಿತಕ್ಕೆ ಒಳಪಟ್ಟಿದ್ದವು ಎಂದು ಗಮನಿಸುತ್ತೇವೆ. ಅಧ್ಯಾಯ 2ರ ಪಂಚಾಶತ್ತಮದಿಂದ ಹದಿನೈದು ದಿನಗಳ ನಂತರ ಹಿರಿಯರು[2] ಎಂಬುದಾಗಿ ಅಪೊಸ್ತಲರ ಕೃತ್ಯದಲ್ಲಿ ದಾಖಲು ಮಾಡಲಾಗಿದೆ. ಅಪೊಸ್ತಲರ ಕೃತ್ಯಗಳು 11:28-30 ರ ಪ್ರಕಾರ, ಅಂತಿಯೋಕ್ಯದ ಕ್ರೈಸ್ತರು ಯುದಾಯದವರಿಗೆ ಉದಾರವಾದ ದೇಣಿಗೆಯನ್ನು ಕಳುಹಿಸಿದ ಸಮಯವಾಗಿತ್ತು. ಅಂತಿಯೋಕ್ಯದವರು ಪೌಲ ಮತ್ತು ಬಾರ್ನಬರ ಮುಖಾಂತರ, ಅನುದಾನವನ್ನು ಹಿರಿಯರ ಕೈಗೆ ಒಪ್ಪಿಸಿದರು. ಆದ್ದರಿಂದ ಸಹಜವಾಗಿ ಹಿರಿಯರೇ ಸಭೆಯ ನಿರ್ವಾಹಕರಾಗಿದ್ದರು ಎಂದು ತಿಳಿಯುತ್ತೇವೆ.

ಇಲ್ಲಿ ಅಪೊಸ್ತಲರು ಎಂದು ತಿಳಿಸದೆ, ಪ್ರವಾದಿಯೆಂದು ಪ್ರಥಮ ಬಾರಿ ದಾಖಲೆಯಾಗಿದೆ. ಆದರೆ ದೇವ ಸಭೆಯನ್ನು ವೃದ್ಧಿ ಪಡಿಸಿ ಮುಂದುವರಿಸಲು ದೇವರು ಮೊದಲಿಗೆ ಪ್ರವಾದಿ ಯನ್ನು ಉಪಯೋಗಿಸಿದನು ಎಂಬ ಅರ್ಥವನ್ನು ನೀಡುವದಿಲ್ಲ.

ಯೆರೂಸಲೇಮಿನಲ್ಲಿ ಅಥವಾ ಯುದಾಯದ ಸಭೆಗಳಲ್ಲಿ ಹಿರಿಯರು ಯಾವಾಗ ಕಾರ್ಯ ಆರಂಭಿಸಿದರು ಎಂಬ ವಿವರವಿರುವದಿಲ್ಲ. ಯೆರೂಸಲೇಮಿನ ಸಭೆಯ ಆರಂಭದಲ್ಲಿ ಅಪೊಸ್ತಲರು ಅದರ ಕಾರ್ಯನಿರ್ವಹಿಸಿ ಮುನ್ನಡೆಸಿದರು, ಯಾಕೆಂದರೆ ವಿಧವೆಯರ ವಿಚಾರದಲ್ಲಿ ಅವರೇ ಮುಂದಾಳತ್ವವನ್ನು ವಹಿಸಿದರು (ಅಪೊಸ್ತಲರ ಕೃತ್ಯಗಳು 6:1-4). ಅಪೊಸ್ತಲರೇ ಅಲ್ಲಿದ್ದದ್ದರಿಂದ, ಯೆರೂಸಲೇಮಿನ ಸಭೆಗೆ ಹಿರಿಯರ ಅಗತ್ಯತೆಯಿರಲಿಲ್ಲ. ಅವರ ಮುಂದಾಳತ್ವದ ಪ್ರೋತ್ಸಾಹದಿಂದ, ಆದಿ ಸಭೆಯು ಅರಳುತ್ತಾ ಮುಂದುವರೆದಿತ್ತು. ಆದರೆ ಅಪೊಸ್ತಲರ ಅಗತ್ಯತೆಯು, ಇತರೆ ಸ್ಥಳಗಳಿಗೆ ಅವಶ್ಯವಿದ್ದರಿಂದ ಈ ಕ್ರಮವು ಮಂದುವರಿಯಲಿಲ್ಲ. ಹಾಗೂ ಸುವಾರ್ತೆಯು ರೋಮಾ ಸಾಮ್ರಾಜ್ಯದಲ್ಲಿ ಹರಡುತ್ತಿರು ವಾಗ, ಆ ಪ್ರದೇಶಗಳಲ್ಲಾಗಲೀ ಅಥವಾ ನಂತರದ ಯುಗಗಳಲ್ಲಾಗಲೀ ಅಪೊಸ್ತಲರು ಉಪಸ್ಥಿತಿಯಲ್ಲಿರಲು ಸಾಧ್ಯವಿರಲಿಲ್ಲ. ಆದ್ದರಿಂದ ದೇವರು ತನ್ನ ಸಭೆಯನ್ನು ಮಂದುವರಿಸಲು ಒಂದು ನಿತ್ಯವಾದ ಏರ್ಪಾಟನ್ನು ಮಾಡಿದನು.

ಪೌಲ ಮತ್ತು ಬಾರ್ನಬರ ಸೇವೆಯ ನಿಮಿತ್ತ ಆಸ್ಯ ಸೀಮೆಯಲ್ಲಿ ಆರಂಭಗೊಂಡ ಸಭೆಗಳಲ್ಲಿ, ಹಿರಿಯರನ್ನು ನೇಮಕ ಮಾಡಿದರು ಎಂದು ಗಮನಿಸುತ್ತೇವೆ (ಅಪೊಸ್ತಲರ ಕೃತ್ಯಗಳು 14:23). ನಂತರ ಅವರು ಉತ್ತರಾಭಿಮುಖವಾಗಿ ಪ್ರಯಾಣ ಮಾಡಿ, ಅಲ್ಲಿಯ ಪ್ರತಿ ಸಭೆಗಳಲ್ಲಿ ಹಿರಿಯನ್ನು ನೇಮಕ ಮಾಡಿದರು. "ಹಿರಿಯನು ಹೊಸದಾಗಿ ಸಭೆಯಲ್ಲಿ ಸೇರಿದವನಾಗಿರಬಾರದು" ಎಂಬ ನಿಯಮದ ಪ್ರಕಾರ, ಟೀಕಾಕಾರರು ಈ ಕುರಿತು ಪ್ರಶ್ನಿಸುತ್ತಾರೆ (1 ತಿಮೊಥೆ 3:6). ಯಾಕಂದರೆ ಇಕೊನಾಯ, ಲುಸ್ತ್ರ ಮತ್ತು ದರ್ಬೆಯಯವರು ಹೊಸದಾಗಿ ಕ್ರೈಸ್ತರಾಗಿದ್ದರು, ಮತ್ತು ಅನುಭವಿಗಳನ್ನು ಹಿರಿಯರನ್ನಾಗಿ ನೇಮಕಮಾಡಿದರು ಎಂಬ ವಿಚಾರವಿದೆ.

ಈ ಸಮಯದಲ್ಲಿ, ಇಬ್ರಿಯರ ನೇಮ ನಿಷ್ಟೆಗಳನ್ನು ಪಾಲಿಸುತ್ತಿದ್ದವರಲ್ಲಿ ಕೆಲವರು ಪರಿವರ್ತನೆಗೊಂಡಿದ್ದರು. ಅಪೊಸ್ತಲರ ಬೋಧನೆ ಮತ್ತು ಪ್ರಸಂಗದ ನಿಮಿತ್ತ ಪರಿವರ್ತನೆಗೊಂಡವರಲ್ಲಿ, ಇವರನ್ನು ದೇವರು ಮಹತ್ವದ ಸ್ಥಾನದಲ್ಲಿ ಇರಿಸಿದ್ದನು. ಇಂತಹ ಪರಿಪಕ್ವಗೊಂಡವರು ಆರಾಧನೆ ಮಾಡುವವರೂ ಹಾಗೂ ದೇವರನ್ನು ಅನುಸರಿಸುವವರೂ ಆಗಿದ್ದರಿಂದ, ದೇವರು ಅವರನ್ನು ಕಲಿಯುತ್ತಿದ್ದವರಿಗಿಂತಲೂ ಉನ್ನತ ಸ್ಥಾನದಲ್ಲಿ ಇರಿಸಿದ್ದನು. ಈ ವಿಧವಾಗಿ ಪರಿಪಕ್ವಗೊಂಡ ಇಬ್ರಿಯರು ಯೇಸುವಿನ ಸುವಾರ್ತೆಗೆ ಮಾನ್ಯತೆಯನ್ನು ನೀಡಿದಾಗ, ಅವರು ರಕ್ಷಣೆಯ ಸಿದ್ಧಾಂಥವನ್ನು ಸ್ಪಷ್ಟವಾಗಿ ಅರಿತುಕೊಂಡರು. ಆದ್ದರಿಂದ ಧರ್ಮಶಾಸ್ತ್ರದ ತಿಳುವಳಿಕೆಯಿಲ್ಲವದರಿಗಿಂತಲೂ ಆತ್ಮೀಕ ಅನುಭವವನ್ನು ಹೊಂದಿದಂಥ ಇವರನ್ನು ದೇವರು ಮುಂದಾಳುಗಳನ್ನಾಗಿ ಮಾಡಿದನು.

ಸುನ್ನತಿಯ ಕುರಿತ ಚರ್ಚೆಯನ್ನು ಮಾಡುವ ಸಂಧರ್ಭದಲ್ಲಿ, ಪುನಃ ಪೌಲನು ಹಿರಿಯರ ಕುರಿತು ತಿಳಿಸಿರುವನು (ಅಪೊಸ್ತಲರ ಕೃತ್ಯಗಳು 15:1, 2). ಮೂರನೇ ಸೇವಾ ಪ್ರಯಾಣದ ಸಮಯದಲ್ಲಿ ಪೌಲನು ಎಫೆಸದ ಹಿರಿಯರನ್ನು ಮಿಲೇತದಲ್ಲಿ ಸಂಧಿಸಿದನು (ಅಪೊಸ್ತಲರ ಕೃತ್ಯಗಳು 20:17). ಅವನ ಮೂರನೇ ಪ್ರವಾಸದ ಅಂತ್ಯದಲ್ಲಿ, ಪೌಲನು ಯಾಕೋಬನನ್ನು ಹಾಗೂ ಯೆರೂಸಲೇಮಿನ ಹಿರಿಯರನ್ನು ಸಂಧಿಸಿ, ವಿಶೇಷವಾದ ಮನವಿಯನ್ನು ಮಾಡಿದನು (ಅಪೊಸ್ತಲರ ಕೃತ್ಯಗಳು 21:17-26). ಸಭೆಗಳಲ್ಲಿ ಪರಿಪಕ್ವತೆಗೆ ಬಂದ ಮುಖಂಡರನ್ನು ದೇವರು ಸಭೆಯ ಮುಂದಾಳತ್ವಕ್ಕೆ ನಡೆಸುವನು. ಇದು ಸಭೆಯ ಕುರಿತ ದೇವರ ಯೋಜನೆಯಾಗಿರುತ್ತದೆ. ಕರ್ತನ ಸೇವೆಯನ್ನು ಮಾಡಲು ಇಂಥವರೇ ಅರ್ಹರು.

ಅಪೊಸ್ತಲರ ಕೃತ್ಯದಲ್ಲಿ ನಮೂದಾಗಿರುವ ಸಭೆಗಳು ಸ್ವ - ಆಡಳಿತವನ್ನು ಹೊಂದಿದ್ದರು. ಪ್ರತಿ ಸಭೆಯು ತನ್ನದೇ ಆದ ಹಿರಿಯರನ್ನು ಹೊಂದಿತ್ತು (ಅಪೊಸ್ತಲರ ಕೃತ್ಯಗಳು 14:23). "ಪೌಲನು ಫಿಲಿಪ್ಪಿಯವರಿಗೆ ಪತ್ರಿಕೆಯನ್ನು ಬರೆಯುವಾಗ, ಮೇಲ್ವಿಚಾರಕರಿಗೂ - ಡಿಕನ್‌ಗಳಿಗೂ" ಎಂದು ಸಂಬೋಧಿಸಿರುವನು (ಫಿಲಿಪ್ಪಿ 1:1). ಎಫೆಸದವರು ಅವರ ವಿಷಯದಲ್ಲೂ ಹಾಗೂ "ಹಿಂಡಿನ" ವಿಷಯದಲ್ಲೂ ಎಚ್ಚರವಾಗಿರಬೇಕೆಂದು ತಿಳಿಸಿದನು (ಅಪೊಸ್ತಲರ ಕೃತ್ಯಗಳು 20:28).

ವ್ಯಭಿಚಾರದ ಕುರಿತ ಸಮಸ್ಯೆಯು ಉದ್ಭವಿಸಿದಾಗ, ಕೊರಿಂಥದವರು ತಾವೇ ಅದನ್ನು ಪರಿಹರಿಸಿಕೊಳ್ಳಬೇಕೆಂಬ ಸಲಹೆಯನ್ನು ಪೌಲನು ನೀಡಿದನು (1 ಕೊರಿಂಥ 5). ಈ ಸಮಸ್ಯೆಯ ಕುರಿತು ಪರಿಹಾರ ಬಯಸಿ ಕೊರಿಂಥ ಸಭೆಯವರು, ಯೆರೂಸಲೇಮಿನ ಸಭೆಯವರಿಗೆ ಮನವಿ ಮಾಡಲಿಲ್ಲ; ಸ್ಥಳೀಯ ಸಭೆಯ ಸದಸ್ಯರುಗಳೇ ಅದನ್ನು ಬಗೆಹರಿಸಿಕೊಳ್ಳಬೇಕಿತ್ತು.

ಹಾಗೂ ಸಭೆಗಳವರು ಒಟ್ಟಾಗಿ ಕೂಡಿ ಕಾರ್ಯನಿರ್ವಹಿಸಿದರು, ಉದಾಹರಣೆಗೆ ಅಂತಿಯೋಕ್ಯದವರು ಯುದಾಯದವರಿಗೆ ಸಹಾಯವನ್ನು ಕಳುಹಿಸಿದರು (ಅಪೊಸ್ತಲರ ಕೃತ್ಯಗಳು 11:28-30). ಪೌಲನು ಥೆಸಲೋನಿಕದಲ್ಲಿ ಪ್ರಸಂಗಿಸುವಾಗ, ಮತ್ತೊಂದು ಸಭೆಯವರು ಅವನಿಗೆ ಸಹಾಯ ಮಾಡಿದರು (ಫಿಲಿಪ್ಪಿ 4:15). ಯುದಾಯದವರ

ಕೊರತೆಗಳನ್ನು ನೀಗಿಸುವದಕ್ಕಾಗಿ, ಸಮುಹವಾಗಿ ಹಣವನ್ನು ಸಂಗ್ರಹಿಸಿ, ಅದನ್ನು ಸಂದಾಯ ಮಾಡಲು ಕೆಲವರನ್ನು ಆಯ್ಕೆ ಮಾಡಿಕೊಂಡರು (2 ಕೊರಿಂಥ 8:19-23).

ಅನೇಕ ಸಭೆಗಳು ಒಟ್ಟಾಗಿ ಸೇರಿ ಯಾವದೇ ನಿರ್ಧಾರಗಳನ್ನು ಕೈಗೊಂಡರು ಎಂಬ ದಾಖಲೆಗಳು ಇರುವದಿಲ್ಲ. ಅವರು ಸಭೆಗಳ ಸಂಘಗಳನ್ನಾಗಲೀ, ಡಯಾಸಿಸ್‌ಗಳ ನ್ನಾಗಲೀ, ಮತ್ತು ಸಲಹೆ ಸೂಚನೆಗಳನ್ನು ಪಡೆಯಲು ಮುಖ್ಯ ಕೇಂದ್ರಗಳನ್ನಾಗಲೀ ಮಾಡಿಕೊಂಡರು ಎಂಬ ಪುರಾವೆಗಳಿರುವದಿಲ್ಲ. ಅವರು ಒಂದೇ ಸಭೆಗಳಾಗಿದ್ದರಿಂದ ಸಹಕಾರ ನೀಡಿದರು. ಅವರು ಒಂದೇ ತತ್ವವನ್ನು ನಂಬಿ ಅದನ್ನೇ ಅನುಸರಿಸಿದರು, ಅವರು ಒಂದೇ ಕ್ರಮವಾಗಿ ಆರಾಧಿಸಿದರು; ಹಾಗೂ ಅವರು ಒಂದೇ ಸುವಾರ್ತೆಯನ್ನು ಸಾರಿದರು. ಸುವಾರ್ತೆಯ ಬೀಜದ ಕುರಿತು ಯೇಸು ಹೇಳಿದ ದೃಷ್ಟಾಂತದಂತೆ (ಲೂಕ 8:4-15), ಅವರು ಒಂದೇ ವಿಧವಾದ ಬೀಜವನ್ನು ಬಿತ್ತಿ, ಒಂದೇ ವಿಧವಾದ ಬೆಳೆಯನ್ನು ಕೊಯ್ದರು.

ಅಪೊಸ್ತಲರ ಕೃತ್ಯದಲ್ಲಿರುವ ಸಭೆಗಳು ಸ್ವತಂತ್ರರೂ ಹಾಗೂ ಸ್ವಕಾರ್ಯಗಳನ್ನು ಮಾಡಿಕೊಳ್ಳುವವರಾಗಿದ್ದರೂ, ಸಹಕಾರ ತೋರುವವರಾಗಿದ್ದರು.

## ಸ್ವಯಂ – ಪ್ರಚಾರಕರು

ಸುವಾರ್ತೆಯನ್ನು ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ (ಅಪೊಸ್ತಲರ ಕೃತ್ಯಗಳು 11:19-26). ಕೊಂಡೊಯ್ಯಲಾಯಿತು ಈ ಹೊಸಗುಂಪಿಗೆ ಸಹಾಯಿಸಲು ಯೆರೂಸಲೇಮಿನವರು (ವಚನಗಳು 22-24), ಮತ್ತು ಬಾರ್ನಬನನ್ನು ಕಳುಹಿಸಿದರು (ವಚನಗಳು 25, 26), ನಂತರ ಅವರು "ಬಹು ಜನರಿಗೆ ಉಪದೇಶಮಾಡಿದರು" (ವಚನ 26).

ತರುವಾಯ, ಇತರೆ ಪಟ್ಟಣದಲ್ಲಿ ಪ್ರಚಾರ ಕಾರ್ಯಕ್ಕಾಗಿ, ಅಂತಿಯೋಕ್ಯದಿಂದ ಬಾರ್ನಬ ಪೌಲರನ್ನು ಕಳುಹಿಸಿದರು (ಅಪೊಸ್ತಲರ ಕೃತ್ಯಗಳು 13:1-3). ಪ್ರಥಮ ಸೇವಾ ಪ್ರಯಾಣದ ನಂತರ ಪೌಲನು ಅಂತಿಯೋಕ್ಯಕ್ಕೆ ಹಿಂದಿರುಗಿ, ಸೇವಾ ವರದಿಯನ್ನು ಸಭೆಗೆ ಸಲ್ಲಿಸಿದರು (ಅಪೊಸ್ತಲರ ಕೃತ್ಯಗಳು 14:26, 27). ಅಂತಿಯೋಕ್ಯಕ್ಕೆ ಹಿಂದಿರುಗಿ, ಸೇವಾ ವರದಿಯನ್ನು ಸಲ್ಲಿಸುತ್ತಲೇ ಇದ್ದನು (ಅಪೊಸ್ತಲರ ಕೃತ್ಯಗಳು 18:22, 23). ಆ ದೇವರ ಸೇವೆಯ ಪ್ರಯಾಣವು ಅಂತಿಯೋಕ್ಯ ಸಭೆಯವರ ಸೇವೆಯೇ ಆಗಿತ್ತು. ಅವರು ಇನ್ನು ಇತರೆ ಸ್ಥಳಗಳಲ್ಲಿ ಪ್ರಚಾರ ಮಾಡಿದರು.

ಪೌಲನು ಫಿಲಿಪ್ಪಿಯಲ್ಲಿ ಸಭೆಯನ್ನು ಸ್ಥಾಪಿಸಿದಾಗ, ಆ ಸಭೆಯವರು ಇತರೆ ಸ್ಥಳಗಳಲ್ಲಿ ಸುವಾರ್ತಾ ಪ್ರಚಾರಕ್ಕಾಗಿ ಪೌಲನು ಸಹಾಯಿಸಿದರು (ಅಪೊಸ್ತಲರ ಕೃತ್ಯಗಳು 16:12-15; ಫಿಲಿಪ್ಪಿ 4:15-18). ಪೌಲನು ಎಫೆಸದಲ್ಲಿ ಪ್ರಸಂಗಿಸುವಾಗ, ಆ ಕ್ರೈಸ್ತರ ಗುಂಪು, ಆಸ್ಯ ಸೀಮೆಯಲ್ಲಿ ಸುವಾರ್ತಾ ಪ್ರಚಾರಮಾಡಲು ಸಹಾಯಿಸಿದರು (ಅಪೊಸ್ತಲರ ಕೃತ್ಯಗಳು 19:10). ಕೊಲೊಸ್ಸೆ ಸಭೆಯವರು ಪೌಲನು ಬರೆದ ಪತ್ರಿಕೆಯನ್ನು ಲವೋದಿಕೀಯ ಸಭೆಯಲ್ಲಿ ಓದಬೇಕೆಂದು ಹೇಳಿದ್ದನು (ಕೊಲೊಸ್ಸೆ 4:16). ಹಾಗೂ ಥೆಸಲೋನಿಕ ಸಭೆಯವರು, ಮೆಕೆದೋನ್ಯ ಹಾಗೂ ಅಖಾಯದವರಿಗೆ ಸುವಾರ್ತಾ ಸಂದೇಶವನ್ನು ರವಾನಿಸಿದರು. ಪೌಲನು ಹೇಳಿದಂತೆ, ದೇವರ ಮೇಲೆ ನೀವು ಇಟ್ಟಿರುವ ನಂಬಿಕೆಯು ಎಲ್ಲಾ ಸ್ಥಳಗಳಲ್ಲಿ ಪ್ರಸಿದ್ಧ ವಾಯಿತ್ತು. (1 ಥೆಸಲೋನಿಕ 1:7, 8).

ಇತರೆ ಸಭೆಗಳ ಹೊಣೆಯನ್ನು ಸಭೆಯು ಹೊಂದಿತ್ತು. ಅವರ ಮೂಲಕವಾಗಿ ಲೋಕ ದಾದ್ಯಂತ ಸುವಾರ್ತಾ ಪ್ರಚಾರವಾಯಿತು (ಕೊಲೊಸ್ಸೆ 1:23).

## ತಮ್ಮ ಅಗತ್ಯತೆಗಳನ್ನು ತಾವೇ ಭರಿಸುತ್ತಿದ್ದರು (ಸ್ವ – ಸಹಾಯ)

ಯಾವುದೇ ಸಭಗಳು ಇತರೆ ಸಭೆಗಳಿಂದ ಪಡೆಯುವ ಹಣವನ್ನು ಅವಲಂಬಿಸಿದ್ದರು ಎಂಬ ದಾಖಲೆಗಳು ಬೈಬಲಿನಲ್ಲಿರುವದಿಲ್ಲ. ಹೇಗೂ ಕೆಲವು ಸಭೆಗಳವರು ಇತರೆ ಸಭೆಗಳ

ಹಣದ ಕೊರತೆಯನ್ನು ನೀಗಿಸಿದ್ದರು.[3] ಎರಡು ಕಾಣಗಳಿಂದ ಹಣದ ಸಹಾಯವನ್ನು ಮಾಡಿದ್ದರು: ಪ್ರಸಂಗಿಗಳ ದಿನನಿತ್ಯದ ಕೊರತೆಯನ್ನು ನೀಗಿಸಲು, ಹಾಗೂ ಪ್ರಸಂಗಿಗಳ ಸಹಾಯಕ್ಕಾಗಿ ಹಾಗೂ ಈ ಸಹಾಯದ ಪದ್ಧತಿಯು ತಾತ್ಕಾಲಿಕವಾಯಿತು.

ಸಭೆಯಲ್ಲಿ ಕೊರತೆಗಳಿದ್ದಾಗ್ಯೂ ಅವರು ಸ್ವತಂತ್ರವಾಗಿಯೇ ಕಾರ್ಯ ನಿರ್ವಹಿಸುತ್ತಿದ್ದರು, ಮತ್ತು ಕರ್ತನ ಹೆಸರಿನಿಂದಲೇ ಎಲ್ಲವನ್ನು ಮಾಡುತ್ತಿದ್ದರು, ಅವರು ಇತರರ ಹಣ ಸಹಾಯವನ್ನು ಎದುರು ನೋಡುತ್ತಿರಲಿಲ್ಲ. ಪೌಲನು ತನ್ನ ವೆಚ್ಚವನ್ನು ಭರಿಸಿಕೊಂಡು ಸೇವೆ ಮಾಡುತ್ತಿದ್ದನು (ಅಪೊಸ್ತಲರ ಕೃತ್ಯಗಳು 18:1-4). ಹಣದ ಸಹಾಯವು ದೊರೆಯದಿದ್ದರೂ, ಸಭೆಗಳು ಸಭೆಗಳಾಗಿಯೇ ಇದ್ದುಕೊಂಡು, ಪ್ರಸಂಗಿಗಳು ಸುವಾರ್ತೆಯನ್ನು ಸಾರುತ್ತಾ ಮುಂದವರಿದಿದ್ದರು. "ಸಾಮಾಜಿಕ ಸೇವೆ" ಮಾಡುತ್ತಿದ್ದ ಯಾವುದೇ ಸಭೆಗಳ ಬಗ್ಗೆ ಅಪೊಸ್ತಲರ ಕೃತ್ಯದಲ್ಲಿ ದಾಖಲೆಗಳಿರುವದಿಲ್ಲ, ಈ ವಿಧವಾದ ಕಾರ್ಯ ನಿರ್ವಹಿಸುವ ಸಭೆಗಳ ಯೋಜನೆಯನ್ನು ದೇವರು ಮಾಡಿರುವದಿಲ್ಲ.

ಸಂಸ್ಕೃತಿಯಲ್ಲಿ ವ್ಯತ್ಯಾಸಗಳಿದ್ದರೂ ಮತ್ತು ಆರ್ಥಿಕವಾಗಿ ಬಳಹಷ್ಟು ಹಣವನ್ನು ಸೇವೆ ಗಾಗಿ, ಸಭಾ ಕಟ್ಟಡಗಳಿಗಾಗಿ, ಹಾಗೂ ಪ್ರಸಂಗಿಗಳ ಸಹಾಯಕ್ಕಾಗಿ ವ್ಯಯ ಮಾಡಲಾಗುತ್ತಿದೆ. ಮೊದಲ ಶತಮಾನದಲ್ಲಿ ಈ ವಿಧವಾದ ವ್ಯತ್ಯಾಸಗಳಿದ್ದವೇ? ಅವುಗಳು ಇದ್ದಾಗ್ಯೂ ಸಹ ಪೌಲ ಮತ್ತು ಇತರರು *ಸುವಾರ್ತೆಯ* ಹೊರತಾಗಿ ಲೋಕಕ್ಕೆ ಸಾಮಾಗ್ರಿಗಳನ್ನು ಒಯ್ಯಲಿಲ್ಲ.

ಈ ದಿವಸಗಳಲ್ಲಿ, ಸಭೆಗಳಲ್ಲಿ ಪ್ರಚಲಿತವಿರುವ ಸಂಗತಿಗಳು, ಹೊಸ ಒಡಂಬಡಿಕೆಯಲ್ಲಿ ಇರಲಿಲ್ಲ. ಅಮೇರಿಕೆಯಲ್ಲಿರುವ ಉತ್ತರದ ರಾಜ್ಯದ ಸಭೆಗಳು ಇದೇ ವಿಧದಲ್ಲಿ ಇರುತ್ತವೆ. ಅವರು ತಮ್ಮ ಪ್ರಸಂಗಿಗಳ ವೆಚ್ಚಕ್ಕಾಗಿ, ದಕ್ಷಿಣದ ಭಾಗದ ಸಭೆಗಳನ್ನು ನೋಡುವವರಾ ಗಿರುತ್ತಾರೆ, ಮತ್ತು ಅವರ ಕಟ್ಟಡಗಳನ್ನು ಕಟ್ಟಲು ಅವರನ್ನೆ ಅವಲಂಭಿಸಿದ್ದರು.

ಪ್ರಪಂಚದಾದ್ಯಂಥ ಈ ವಿಚಾರವು ಪ್ರಚಲಿತವಾಗಿರುತ್ತದೆ, ಕಟ್ಟಡಗಳು ಕಟ್ಟಲ್ಪಟ್ಟು ಪ್ರಸಂಗಿಗಳಿಗೆ ಸಹಾಯವು ದೊರೆತ್ತಿರುತ್ತದೆ. ಈ ಕಾರ್ಯವು ಅನೇಕ ವರ್ಷಗಳಿಂದ ಮುಂದುವರಿಯುತ್ತಿದೆ; ಆ ಸಭೆಗಳು ಸ್ವಾವಲಂಭಿಗಳಾಗಿರುವದಿಲ್ಲ. ಇತರೆ ದೇಶದ ಪ್ರಸಂಗಿಗಳನ್ನು ಅಮೇರಿಕೆಯ ವೇದಶಾಲೆಗಳಿಗೆ ಕಳುಹಿಸಲಾಗುತ್ತಿದೆ, ಅದಕ್ಕೆ ಅಮೇರಿ ಕೆಯ ಕೆಲ ಸಭೆಗಳು ಸಹಾಯ ನೀಡುತ್ತವೆ. ಈ ಪ್ರಸಂಗಿಗಳು ಹಿಂದಿರುಗಿದಾಗ, ಅವರಿಗೆ ಸಹಾಯವನ್ನು ಮುಂದುವರಿಸಲಾಗುತ್ತಿತ್ತು, ಸಭೆಗಳು ಆರ್ಥಿಕವಾಗಿ ಸ್ವಾವಲಂಭಿಗಳಾಗಿ, ಸ್ವ - ಆಡಳಿತಕ್ಕೆ ಒಳಪಡಬೇಕು ಎಂಬ ಅರಿವನ್ನು ಕೆಲವರು ಹೊಂದಿರುವದಿಲ್ಲ. ಅಮೇರಿಕೆಯಿಂದ ಹೆಚ್ಚಾದ ಹಣವು ಹರಿದು ಬರುವದರಿಂದ, ಪ್ರಸಂಗಿಗಳು, ಬೋಧಕರುಗಳು ಹಾಗೂ ಕ್ರೈಸ್ತರುಗಳು ಕರ್ತನ ಸಭೆಯು, "ಅಮೇರಿಕೆಯ ಸಭೆ ಎಂದು ತಿಳಿಯುವರು" ಆದ್ದರಿಂದ ಎಲ್ಲದ್ದಕ್ಕೂ ಅಮೇರಿಕೆಯನ್ನೇ ದೃಷ್ಟಿಸಬೇಕು ಎಂದು ತಿಳಿಯುತ್ತಾರೆ. ಸ್ವಸಹಾಯದ ಕುರಿತು ಯಾವ ವಿಧವಾದ ಮಾನಸಿಕ ಪ್ರಶ್ನೆಯನ್ನು ಹಾಕಿಕೊಳ್ಳಬಹುದು?[4]

ಈ ದೇಶಗಳಿಗೆ, ಅಮೇರಿಕೆಯ ಹಣದ ಸರಭರಾಜು ನಿಂತು ಹೋದರೆ, ಅವುಗಳ ಗತಿ ಏನಾಗಬಹುದು? ಯಥಾರ್ಥವಾದ ಆರಾಧನೆ ಮುಂದುವರೆಯುತ್ತದೆಯೋ? ಎಷ್ಟು ಸಭೆಗಳು ನಿರ್ಲಿಪ್ತವಾಗುತ್ತವೆ? ಎಷ್ಟು ಜನರು ಸುವಾರ್ತೆ ಸಾರುವದನ್ನು ಮುಂದುವರೆಸಬಹುದು? ಅಥವಾ ಅವರಿಗೆ ಇತರ ಸಂಸ್ಥೆಯವರು ಹಣವನ್ನು ನೀಡುವದಾದರೆ, ಅವರಿಗಾಗಿ ಸುವಾರ್ತೆಯನ್ನು ಎಷ್ಟು ಪ್ರಸಂಗಿಗಳು ಮಾಡಬಹುದು? ಸುವಾರ್ತೆಯ ವಿಚಾರದಲ್ಲಿ ವ್ಯವಹಾರ ಮಾಡುವ ಅನೇಕ ಅಮೇರಿಕೆಯ ಪ್ರಸಂಗಿಗಳು, ಜೀವನ ಪರ್ಯಂತರ ಸುವಾರ್ತೆಯನ್ನು ತ್ಯಾಗದಿಂದ ಮತ್ತು ಸಮರ್ಪಣೆಯ ಮನೋಭಾವದಿಂದ ಮಾಡಬಹುದೇ! ಸಭೆಗಳ ಸಹಾಯವು ದೊರೆತರೂ, ದೊರೆಯದಿದ್ದರೂ, ಪೌಲನು ಸುವಾರ್ತೆಯನ್ನು ಮುಂದುವರಿಸಿದನು; ಎಷ್ಟು ಜನರು ಪ್ರಸಂಗಿಗಳು ಈ ಕಾರ್ಯವನ್ನು ಮಾಡಲು ಸಾಧ್ಯ ಅಥವಾ ಮಾಡುತ್ತಿರುವರು?

ಕರ್ತನ ಸೇವೆಗಾಗಿ, ಅಮೇರಿಕದ ಆದಿ ಸೇವಕರ ತ್ಯಾಗ ಹಾಗೂ ಸಮರ್ಪಣೆಯ

ಮನೋಭಾವದಿಂದ ಭಲವಾದ ಸೇವೆಯನ್ನು ಮಾಡಿದ್ದರ ನಿಮಿತ್ತ ಈ ದಿನಗಳಲ್ಲಿ ಅಮೇರಿಕೆಯಲ್ಲಿ ಬಹಳವಾದ ಹಾಗೂ ಭಲವಾದ ಸಭೆಗಳು ಪ್ರಚಲಿತವಾಗಿವೆ. "ಮನುಷ್ಯರು ದಿನವೆಲ್ಲ ಉಳುವ ಕಾರ್ಯವನ್ನು ಮಾಡಿದರು ಮತ್ತು ರಾತ್ರಿಯೆಲ್ಲಾ ಪ್ರಸಂಗ ಮಾಡಿದರು" ಅವರು ಅದಕ್ಕಾಗಿ ಹಣವನ್ನು ಬಯಸಲಿಲ್ಲ, ಕ್ರೈಸ್ತರು ಮನೆಗಳಲ್ಲಿ, ಶಾಲೆಗಳಲ್ಲಿ, ಬಾಡಿಗೆ ಅಂಗಡಿಗಳಲ್ಲಿ ಹಾಗೂ ಮರಗಳ ಕೆಳಗೆ ಆರಾಧನೆಗಾಗಿ ಸೇರಿಬರುತ್ತಿದ್ದರು, ನಂತರದಲ್ಲಿ ಕಟ್ಟಡಗಳನ್ನು ಕಟ್ಟಿಕೊಂಡರು. ಆದರೆ ಅಮೇರಿಕದ ಕ್ರೈಸ್ತರು "ತಾವು ನಿರ್ಮಾಣ ಮಾಡದೆ ಇರುವ ಸಭಾ ಕಟ್ಟಡಗಳಲ್ಲಿ ತಮ್ಮನ್ನು ಬೆಚ್ಚಗೆ ಮಾಡಿಕೊಳ್ಳುತ್ತಿದ್ದಾರೆ." ಮುಂದಿನ ಜನಾಂಗಕ್ಕಾಗಿ ಹಿಂದಿನ ಜನಾಂಗದವರು ಉತ್ತಮವಾದ ಆರಾಧನ ಸ್ಥಳಗಳನ್ನು ಮಾಡಿರುವರಲ್ಲವೇ. ಆದಿ ಸೇವಕರುಗಳ ಕಷ್ಟದ ಸೇವೆಯ ನಿಮಿತ್ತ ಬಲವಾದ ನಾಯಕರುಗಳು ಹಾಗೂ ಬಲವಾದ ಸಭೆಗಳು ಉಂಟಾದವಲ್ಲವೇ.

ಅಮೇರಿಕೆ ಸಭೆಗಳವರು ವಿವಿಧವಾಗಿ ಸಹಾಯಿಸಲು ಸಾಧ್ಯವಿರಬಹುದು, ಆದರೆ ಹೊಸ ಸಭೆಗಳು ತ್ಯಾಗದ ಮನೋಭಾವದಿಂದ ಸ್ವಯಂ ಅವಲಂಭನೆಗೆ ನಡೆಸಿಕೊಳ್ಳ ಬೇಕು. ಸ್ಥಿರ ಮನಸ್ಸಿಲ್ಲದ ಕೆಲವು ಸಭೆಗಳವರು, ಹಣದ ಮೇಲೆಯೇ ಸೇವೆಯ ಅವಲಂಭಿಸರುತ್ತದೆ ಎಂದು ತಿಳಿಯುತ್ತಲೇ ಇರುವರು.

ಇದನ್ನು ಸರಳ ದೃಷ್ಟಾಂತದಿಂದ ತಿಳಿಯಬಹುದು. ಹೊಸದಾಗಿ ಮದುವೆಯಾದ ದಂಪತಿಗಳಿಗೆ, ಅವರ ತಂದೆ ತಾಯಿಗಳ ಶೈಲಿಯಲ್ಲಿಯೇ ಬದುಕುವಂತೆ, ಅವರು ಹಣವನ್ನು ನೀಡುವದಾದರೆ? ಈ ಸಹಾಯವು ಅನೇಕ ವರ್ಷಗಳ ಕಾಲ ಮುಂದುವರೆದರೆ, ಆದಂಪತಿಗಳು ಕೆಲಸಮಾಡುವ ಅಗತ್ಯವಿದೆಯೇ? ಈ ಪರಿಸ್ಥಿತಿಯಲ್ಲಿ, ಅವರಲ್ಲಿ ತಿಳುವಳಿಕೆ, ಸ್ವಾವಂಲಂಭನೆ ಹಾಗೂ ನಾಯಕತ್ವವು ಉಂಟಾಗಲು ಸಾಧ್ಯವೇ? ಸಾಧ್ಯವಿಲ್ಲ, ಯಾಕೆಂದರೆ ತಂದೆ ತಾಯಿಗಳು ಹೊಸ ದಂಪತಿಗಳಿಗೆ ಸಹಾಯವನ್ನು ನೀಡುತ್ತಲೇ ಇದ್ದರೆ, ಅವರ ಸ್ವಾವಲಂಭನೆಯ ಜೀವಿತಕ್ಕೆ ಕುಂಠಿತವಾಗುತ್ತದಲ್ಲವೇ? ಹೊಸ ದಂಪತಿಗಳಲ್ಲಿ ಇದು ಸತ್ಯವಾದ ಕಾರ್ಯವಾಗುವದಾದರೆ, ಹೊಸ ಸಭೆಗಳ ಸೇವೆಯಲ್ಲಿಯೂ ಇದೇ ಕಾರ್ಯವು ಆಗುವ ಸಾಧ್ಯತೆ ಇರುವದಿಲ್ಲವೇ?

## ಮುಕ್ತಾಯ

21ನೇ ಶತಮಾನದಲ್ಲಿ ಮಾದರಿಯ ಸಭೆಗಳಾಗಬೇಕಿದ್ದರೆ, ಅಪೊಸ್ತಲರ ಕ್ಷೇತ್ರ ದಲ್ಲಿರುವ ನಿದರ್ಶನವನ್ನು ಅನುಸರಿಸಬೇಕು, ದೇವರ ಮಾರ್ಗದಲ್ಲಿಯೇ, ದೇವರ ಕೆಲಸವನ್ನು ಮಾಡಬೇಕು. ದೇವರ ವಾಕ್ಯಕ್ಕಗನುಗುಣವಾದ, ಹಾಗೂ ವಾಕ್ಯ ದಲ್ಲಿರುವಂತೆ ನಿದರ್ಶನವನ್ನು ಹೊಂದಿರುವ ಸಭೆಗಳು ಸ್ವ-ಆಡಳಿತ, ಸ್ವಯಂ ಪ್ರಚಾರ, ಹಾಗೂ ಸ್ವಾವಲಂಭಿಯಾದ ಸಭೆ ಗಳಾಗುವದಕ್ಕೆ ಸಾಧ್ಯವಿದೆ.

---

ಟಿಪ್ಪಣಿಗಳು

[1]"ಸಭೆಯ ಬರೋಣದ" ಕುರಿತು ಈ ಪುಸ್ತಕದಲ್ಲಿ ನೋಡಿದ್ದೇವೆ. [2]"ದೇವರ ಹೊಸ ಆಡಳಿತದ" ಕುರಿತು ಈ ಪುಸ್ತಕದಲ್ಲಿ ನೋಡಿದ್ದೇವೆ. [3]"ಪ್ರೀತಿಯ ಔದಾರ್ಯದ" ಕುರಿತು ಈ ಪುಸ್ತಕದಲ್ಲಿ ನೋಡಿ ದ್ದೇವೆ. [4]ಈ ವಿದಧ "ಸಹಾಯದ ಆಲೋಚನೆಯನ್ನು" ಅಮೇರಿಕೆಯವರು ಅನುಸರಿಸುವರು ಅದು ಸರ್ಕಾರದ ಆಲೋಚನೆಯಾಗಿದ್ದರೂ, ಅದು ಕ್ರೈಸ್ತರಲ್ಲೂ ಆಚರಣೆಗೆ ಬಂದಿರುತ್ತದೆ.